INCLUSIVE EDUCATION

Understanding Article 24 of the Convention on the Rights of Persons with Disabilities

# ಸಮನ್ವಯ ಶಿಕ್ಷಣ

## ದಿವ್ಯಾಂಗ ವ್ಯಕ್ತಿಗಳ ಹಕ್ಕುಗಳ ಸಮಾವೇಶದ ಆರ್ಟಿಕಲ್ 24ನ್ನು ಅರ್ಥಮಾಡಿಕೊಳ್ಳುವುದು

ಸೆಪ್ಟಂಬರ್ 2017

ವಿಶ್ವಸಂಸ್ಥೆಯ ದಿವ್ಯಾಂಗ ವ್ಯಕ್ತಿಗಳ ಹಕ್ಕುಗಳ ಸಮಾವೇಶವು (CRPD) ಎಲ್ಲಾ ದಿವ್ಯಾಂಗ ವ್ಯಕ್ತಿಗಳಿಗೆ ಸಮನ್ವಯ ಶಿಕ್ಷಣದ ಹಕ್ಕನ್ನು ಗುರುತಿಸುತ್ತದೆ. ಆದರೆ ಇದರ ಅರ್ಥವೇನು? ಮತ್ತು ಇದನ್ನು ಸಾಕಾರಗೊಳಿಸಲು ಯಾವ ಕ್ರಮಗಳ ಅಗತ್ಯವಿದೆ? ದಿವ್ಯಾಂಗ ವ್ಯಕ್ತಿಗಳ ಹಕ್ಕುಗಳ ಸಮಿತಿಯು (ಸಮಾವೇಶವನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಸ್ಥಾಪಿಸಲಾದ ಅಂತರರಾಷ್ಟ್ರೀಯ ಸಂಸ್ಥೆ) ಶಿಕ್ಷಣದ ಬಗ್ಗೆ ಒಂದು 'ಸಾಮಾನ್ಯ ವ್ಯಾಖ್ಯಾನ' ನೀಡಿದೆ. ಅದು ಸಮನ್ವಯ ಶಿಕ್ಷಣವನ್ನು ಅರ್ಥೈಸುವ ಮತ್ತು ಅದನ್ನು ಮಾಡಲು ಸರ್ಕಾರಗಳು ಏನು ಮಾಡಬೇಕು ಎಂಬುದನ್ನು ವಿವರವಾಗಿ ತಿಳಿಸುವ ದಾಖಲೆಯಾಗಿದೆ.

ಈ ಕರಪತ್ರವು ಈ ಸಾಮಾನ್ಯ ವ್ಯಾಖ್ಯಾನದ ಒಂದು ಅವಲೋಕನವನ್ನು ಒದಗಿಸುತ್ತದೆ. ಸಮಾಜದಲ್ಲಿ ಇತರರೊಂದಿಗೆ ಸಮಾನವಾಗಿ, ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ವ್ಯವಹರಿಸುವುದಕ್ಕೆ ವಿವಿಧ ರೀತಿಯಲ್ಲಿ ಅಡ್ಡಿಗಳನ್ನು ಉಂಟುಮಾಡಬಹುದಾದ ದೀರ್ಘಾವಧಿಯ ದೈಹಿಕ, ಮಾನಸಿಕ, ಬೌದ್ಧಿಕ ಅಥವಾ ಸಂವೇದನಾ ದೌರ್ಬಲ್ಯಗಳನ್ನು ಹೊಂದಿರುವವರು ಸೇರಿದಂತೆ ಎಲ್ಲಾ ದಿವ್ಯಾಂಗ ಮಕ್ಕಳಿಗೆ ಇದು ಅನ್ವಯಿಸುತ್ತದೆ (ಆರ್ಟಿಕಲ್ 1- CRPD)

### ಸಮನ್ವಯ ಶಿಕ್ಷಣವನ್ನು ಅರ್ಥಮಾಡಿಕೊಳ್ಳುವುದು

### ಸಮನ್ವಯ ಶಿಕ್ಷಣ ಎಂದರೇನು?

ಪ್ರತಿ ಮಗುವಿಗೆ ಶಿಕ್ಷಣದ ಹಕ್ಕಿದೆ. ಅದರಲ್ಲಿ ದಿವ್ಯಾಂಗ ಮಕ್ಕಳೂ ಸೇರಿದ್ದಾರೆ. ವಿಕಲತೆ ಹೊಂದಿರುವ ಪ್ರತಿ ಮಗುವಿಗೆ ಸಮನ್ವಯ ಶಿಕ್ಷಣವು ಮೂಲಭೂತ ಮಾನವ ಹಕ್ಕು ಎಂದು CRPD ಒತ್ತಿ ಹೇಳುತ್ತದೆ. ಒಂದು ಸಮನ್ವಯ ಶಿಕ್ಷಣ ವ್ಯವಸ್ಥೆಯು ಎಲ್ಲಾ ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯಗಳು ಅಥವಾ ಅಗತ್ಯತೆಗಳು ಏನೇ ಇರಲಿ ಮತ್ತು ಎಲ್ಲಾ ಹಂತಗಳಲ್ಲಿ, ಅಂದರೆ ಶಾಲಾ ಪೂರ್ವ ಶಿಕ್ಷಣ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ, ಉನ್ನತ ಶಿಕ್ಷಣ, ವೃತ್ತಿಪರ ಶಿಕ್ಷಣ ಮತ್ತು ಆಜೀವ ಕಲಿಕೆಗೆ ಈ ಎಲ್ಲಾ ಹಂತಗಳಲ್ಲಿ ಅವಕಾಶ ಕಲ್ಪಿಸುತ್ತದೆ.


ಸಮನ್ವಯ ಶಿಕ್ಷಣವು ಯಾವುದು ಮತ್ತು ಯಾವುದಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗಿದೆ;

- ಹೊರಗಿಡುವಿಕೆ : ದಿವ್ಯಾಂಗ ವಿದ್ಯಾರ್ಥಿಗಳಿಗೆ ಯಾವುದೇ ರೂಪದ ಶಿಕ್ಷಣದಲ್ಲಿ ಪ್ರವೇಶವನ್ನು ನಿರಾಕರಿಸಲಾಗುತ್ತದೆ.
- ಬೇರ್ಪಡಿಸುವುದು: ದಿವ್ಯಾಂಗ ವಿದ್ಯಾರ್ಥಿಗಳ ಶಿಕ್ಷಣವನ್ನು ಪ್ರತ್ಯೇಕವಾಗಿ ರೂಪಿಸಿದ ನಿರ್ದಿಷ್ಟ ಪರಿಸರದಲ್ಲಿ ಮತ್ತು ವಿಕಲತೆ ಇಲ್ಲದ ವಿದ್ಯಾರ್ಥಿಗಳಿಂದ ಪ್ರತ್ಯೇಕಿಸಿ ನೀಡಲಾಗುತ್ತದೆ.

· ಏಕೀಕರಣ: ವಿಕಲತೆ ಇರುವ ವಿದ್ಯಾರ್ಥಿಗಳನ್ನು ಮುಖ್ಯವಾಹಿನಿಯ ಶಿಕ್ಷಣ ಸಂಸ್ಥೆಗಳಲ್ಲಿ ಅವರು ಹೊಂದಿಕೊಳ್ಳುವ ಮೊದಲೇ ಇರಿಸುವುದು ಮತ್ತು ವಿದ್ಯಾರ್ಥಿ ಅದಕ್ಕೆ ಹೊಂದಿಕೊಳ್ಳಬೇಕು ಎಂದು ನಿರೀಕ್ಷಿಸುವುದು.

· ಒಳಗೊಳ್ಳುವಿಕೆ: ಶೈಕ್ಷಣಿಕ ಪರಿಸರಗಳು ತಾರತಮ್ಯವಿಲ್ಲದೇ ಎಲ್ಲಾ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ವಿನ್ಯಾಸ ಮತ್ತು ಭೌತಿಕ ರಚನೆಗಳು, ಬೋಧನಾ ವಿಧಾನಗಳು ಮತ್ತು ಪಠ್ಯಕ್ರಮದ ಜೊತೆಗೆ ಶೈಕ್ಷಣಿಕ ಪರಿಸರಗಳ ಸಂಸ್ಕೃತಿ, ನೀತಿ ಮತ್ತು ಪರಿಪಾಠಗಳನ್ನೂ ಅಳವಡಿಸಿಕೊಳ್ಳಬೇಕು. ಈ ರೀತಿಯ ಅಳವಡಿಕೆ ಮಾಡಿಕೊಳ್ಳದೇ ಮುಖ್ಯವಾಹಿನಿಯ ತರಗತಿಗಳ ನಡುವೆ ದಿವ್ಯಾಂಗ ವಿದ್ಯಾರ್ಥಿಗಳನ್ನು ಇರಿಸುವುದು ಒಳಗೊಳ್ಳುವಿಕೆಯಾಗುವುದಿಲ್ಲ.


ಸಮನ್ವಯ ಶಿಕ್ಷಣವು ಏಕೆ ಮುಖ್ಯವಾಗಿದೆ?




ಸಮನ್ವಯ ಶಿಕ್ಷಣವು ಏನನ್ನು ಒಳಗೊಂಡಿರುತ್ತದೆ?

ಸಮನ್ವಯ ಶಿಕ್ಷಣವು ಶಾಸನ ಮತ್ತು ನೀತಿ, ಹಣಕಾಸು ವ್ಯವಸ್ಥೆಗಳು, ಆಡಳಿತ, ವಿನ್ಯಾಸ, ವಿತರಣೆ ಮತ್ತು ಶಿಕ್ಷಣದ ಮೇಲ್ವಿಚಾರಣೆ ಮತ್ತು ಶಾಲೆಗಳು ಯಾವ ರೀತಿ ವ್ಯವಸ್ಥಿತಗೊಂಡಿವೆ ಎಂಬುದನ್ನೆಲ್ಲ ಒಳಗೊಂಡ ಇಡೀ ಶಿಕ್ಷಣ ವ್ಯವಸ್ಥೆಯನ್ನೇ ಪರಿವರ್ತಿಸುವ ಉದ್ದೇಶವನ್ನು ಹೊಂದಿದೆ.

ಅದಕ್ಕೆ ಈ ಬದಲಾವಣೆಗಳ ಅಗತ್ಯವಿದೆ:



**ಸಹಭಾಗಿತ್ವಗಳು:**
ಪೋಷಕರು, ಶಿಕ್ಷಕರು
ದಿವ್ಯಾಂಗ ಜನರ

**ಸಾಂಸ್ಕೃತಿಕ ಬದಲಾವಣೆ:** ವೈವಿಧ್ಯ ಮತ್ತು ಸಹಭಾಗಿ ಕಲಿಕೆಗೆ ಗೌರವ

ಸಮನ್ವಯ ಶಿಕ್ಷಣದ ಹಕ್ಕು, ಆರ್ಟಿಕಲ್ 24ರ ವ್ಯಾಖ್ಯಾನ

ಶಿಕ್ಷಣದ ಹಕ್ಕು ಎಲ್ಲಾ ಮಕ್ಕಳಿಗೆ ಅನ್ವಯಿಸುತ್ತದೆ. ವಿಕಲತೆಯನ್ನು ಹೊಂದಿರುವ ಮಕ್ಕಳಿಗೆ ಈ ಹಕ್ಕಿನ ಸೌಲಭ್ಯ ಸಿಗಬೇಕೆಂದರೆ ಯಾವುದರ ಅಗತ್ಯವಿದೆ ಎಂಬುದನ್ನು ಆರ್ಟಿಕಲ್ 24 ವಿವರಿಸುತ್ತದೆ.

ತಾರತಮ್ಯವಿಲ್ಲದಿರುವಿಕೆ: ದಿವ್ಯಾಂಗ ಮಕ್ಕಳು ತಾರತಮ್ಯವಿಲ್ಲದೆ ಮತ್ತು ಸಮಾನತೆಯ ಆಧಾರದ ಮೇಲೆ ಶಿಕ್ಷಣವನ್ನು ಪಡೆಯಬೇಕು. ಇದರ ಅರ್ಥ ಅವರನ್ನು ಪ್ರತ್ಯೇಕಿಸಿ ಇಡಬಾರದ ಹಕ್ಕನ್ನು ಅವರು ಹೊಂದಿರುವುದು, ಮತ್ತು ಅವರಿಗೆ ಅಗತ್ಯವಿರುವ ಎಲ್ಲಾ ಬೆಂಬಲವನ್ನು ಒದಗಿಸುವುದು. ಕಾನೂನು, ಭೌತಿಕ, ಸಂವಹನ ಮತ್ತು ಭಾಷೆ, ಸಾಮಾಜಿಕ, ಆರ್ಥಿಕ ಮತ್ತು ಇತರರಿಂದ ತೋರಲ್ಪಡುವ ವರ್ತನೆಯ ಅಡೆತಡೆಗಳಂತಹ ಎಲ್ಲಾ ಅಡೆತಡೆಗಳನ್ನು ತೆಗೆದು ಹಾಕಬೇಕು.

ಶಿಕ್ಷಣದ ಗುರಿ: ಶಿಕ್ಷಣವು ದಿವ್ಯಾಂಗ ಮಕ್ಕಳ ಎಲ್ಲಾ ಸಾಮರ್ಥ್ಯಗಳು ಮತ್ತು ಎಲ್ಲಾ ಸಾಮರ್ಥ್ಯಗಳ ಸಂಪೂರ್ಣ ಬೆಳವಣಿಗೆಯನ್ನು ಉತ್ತೇಜಿಸಬೇಕು. ಸಮಾಜದಲ್ಲಿ ಸಂಪೂರ್ಣವಾಗಿ ಭಾಗವಹಿಸಲು ಅವರಿಗೆ ಬೆಂಬಲ ನೀಡಬೇಕು, ಮತ್ತು ಮಾನವ ಹಕ್ಕುಗಳು, ವೈವಿಧ್ಯ, ಸಹಿಷ್ಣುತೆ ಹಾಗೂ ಪರಿಸರಕ್ಕೆ ತೋರಬೇಕಾದ ಗೌರವವನ್ನು ಕುರಿತ ಅರಿವನ್ನು ಅವರಿಗೆ ಮೂಡಿಸಬೇಕು.

ಯಾವುದೇ ರೀತಿಯಿಂದಲೂ ಅವರನ್ನು ಪ್ರತ್ಯೇಕಿಸಬಾರದು: ಸಾಮಾನ್ಯ ಶಿಕ್ಷಣ ವ್ಯವಸ್ಥೆಯಿಂದ ದಿವ್ಯಾಂಗ ಮಕ್ಕಳನ್ನು ಎಂದಿಗೂ ಹೊರಗಿಡಬಾರದು, ಅವರ ಪ್ರವೇಶವನ್ನು ಮಿತಿಗೊಳಿಸುವ ಕಾನೂನನ್ನು ರದ್ದುಗೊಳಿಸಬೇಕು.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಅವಕಾಶ:- ದಿವ್ಯಾಂಗ ಮಕ್ಕಳಿಗೆ ಅವರು ವಾಸಿಸುವ ಸಮುದಾಯಗಳಲ್ಲಿ ಸಮನ್ವಯಿತ, ಗುಣಮಟ್ಟದ ಮತ್ತು ಉಚಿತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಪ್ರವೇಶವಕಾಶ ಒದಗಿಸಬೇಕು. ಇದರ ಅರ್ಥ:

- ದೇಶದಾದ್ಯಂತ ಸೂಕ್ತ ಪ್ರಮಾಣದಲ್ಲಿ ಶಾಲೆಗಳು ಲಭ್ಯವಿರಬೇಕು.
- ಎಲ್ಲಾ ದಿವ್ಯಾಂಗ ಮಕ್ಕಳಿಗೆ ಶಾಲೆಗಳು ಲಭ್ಯವಿರಬೇಕು - ಕಟ್ಟಡಗಳು, ಸಾರಿಗೆ, ಆಟದ ಮೈದಾನಗಳು, ನೈರ್ಮಲ್ಯ ಮತ್ತು ಶೌಚಾಲಯ ಸೌಲಭಗಳು, ಸಂವಹನ, ಪಠ್ಯಕ್ರಮ, ಶಿಕ್ಷಣ ಸಾಮಗ್ರಿಗಳು, ಬೋಧನಾ ವಿಧಾನಗಳು ಮತ್ತು ಮೌಲ್ಯಮಾಪನ ಮತ್ತು ಬೆಂಬಲ ಸೇವೆಗಳನ್ನು ಒಳಗೊಂಡಂತೆ.

· ಶಿಕ್ಷಣ ಸೇವೆಗಳು ಎಲ್ಲಾ ದಿವ್ಯಾಂಗ ವಿದ್ಯಾರ್ಥಿಗಳ ಅಗತ್ಯತೆಗಳು, ಸಂಸ್ಕೃತಿಗಳು ಮತ್ತು ಭಾಷೆಗಳಿಗೆ ಸ್ವೀಕಾರಾರ್ಹವಾಗಿರಬೇಕು

· ವಿವಿಧ ಕಲಿಕೆಯ ಅವಶ್ಯಕತೆಗಳನ್ನು ಹೊಂದಿರುವ ವಿದ್ಯಾರ್ಥಿಗಳ ಅಗತ್ಯಗಳಿಗೆ ಶಾಲೆಗಳು ಹೊಂದಿಕೊಳ್ಳಬೇಕು.

ಸಮಂಜಸವಾದ ಸೌಕರ್ಯ: ದಿವ್ಯಾಂಗ ವಿದ್ಯಾರ್ಥಿಗಳು ಇತರರೊಂದಿಗೆ ಸಮಾನವಾಗಿ ಶಿಕ್ಷಣವನ್ನು ಹೊಂದಲು ಅವರಿಗೆ 'ಸಮಂಜಸವಾದ ಸೌಕರ್ಯ' ಇರುವ ಪರಿಸರವನ್ನು ಒದಗಿಸಬೇಕು. ಇದು ಅವರು ತಾರತಮ್ಯವಿಲ್ಲದ ಶಿಕ್ಷಣವನ್ನು ಪಡೆಯುವಂತಾಗಲು ಮಾಡುವ ಬದಲಾವಣೆಗಳು ಅಥವಾ ಸೇವೆಗಳನ್ನು ಒಳಗೊಂಡಿರಬಹುದು. ಅದು ಎಷ್ಟು ವೆಚ್ಚದ್ದು ಎಂಬುದಕ್ಕೆ ಸಂಬಂಧಿಸಿ ಅದು ಪ್ರಸ್ತುತವಾಗುತ್ತದೆಯೆ ಅಥವಾ ಪರಿಣಾಮಕಾರಿಯಾಗಿದೆಯೇ ಎಂಬುದನ್ನು ಅಳೆದು ಸೌಕರ್ಯವು ಸಮಂಜಸವಾಗಿದೆಯೇ ಇಲ್ಲವೆ ಎಂದು ನಿರ್ಧರಿಸಬೇಕಾಗುತ್ತದೆ. ಅಗತ್ಯವಿರುವ ಸೌಕರ್ಯಗಳ ಪ್ರಕಾರವನ್ನು ಯಾವಾಗಲೂ ವಿದ್ಯಾರ್ಥಿಯೊಂದಿಗೆ ಮತ್ತು ಸೂಕ್ತವಾದಲ್ಲಿ ಅವರ ಪೋಷಕರು ಮತ್ತು ಆರೈಕೆ ಮಾಡುವವರೊಂದಿಗೆ ನಿರ್ಧರಿಸಬೇಕು, ಸೌಕರ್ಯಗಳು, ಉದಾಹರಣೆಗೆ ಇವನ್ನು ಒಳಗೊಂಡಿರಬಹುದು:

· ತರಗತಿಯ ಸ್ಥಳವನ್ನು ಬದಲಾಯಿಸುವುದು

· ತರಗತಿಯೊಳಗಿನ ಸಂವಹನದ ವಿವಿಧ ರೂಪಗಳನ್ನು ಒದಗಿಸುವುದು

· ಮುದ್ರಣವನ್ನು ದೊಡ್ಡದಾಗಿಸುವುದು, ಸಾಮಗ್ರಿಗಳನ್ನು ಮತ್ತು / ಅಥವಾ ವಿಷಯಗಳನ್ನು ಸಂಕೇತ ಅಥವಾ ಪರ್ಯಾಯ ಸ್ವರೂಪದಲ್ಲಿ ಒದಗಿಸುವುದು

· ವಿದ್ಯಾರ್ಥಿಗಳಿಗೆ ಸಹಾಯಕ ತಂತ್ರಜ್ಞಾನವನ್ನು ಅಥವಾ ಭಾಷಾ ವ್ಯಾಖ್ಯಾನಕಾರರನ್ನು ಒದಗಿಸುವುದು

· ಕಲಿಕೆ ಮತ್ತು ಮೌಲ್ಯಮಾಪನದ ಸಂದರ್ಭಗಳಲ್ಲಿ ಸಹಾಯಕ ತಂತ್ರಜ್ಞಾನವನ್ನು ಬಳಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು

· ಹಿನ್ನೆಲೆಯ ಶಬ್ದದ ಮಟ್ಟವನ್ನು ಕಡಿಮೆ ಮಾಡುವುದು ಮತ್ತು ಅವರ ಇಂದ್ರಿಯಗಳಿಗೆ ಅಗತ್ಯಕ್ಕಿಂತ ಹೆಚ್ಚಿನ ಹೊರೆಬೀಳದಂತೆ (sensory overload) ಸಂವೇದನಾಶೀಲರಾಗಿರುವುದು

· ಪರ್ಯಾಯ ಮೌಲ್ಯಮಾಪನ ವಿಧಾನಗಳನ್ನು ಒದಗಿಸುವುದು ಅಥವಾ ಪಠ್ಯಕ್ರಮದ ಒಂದು ಅಂಶವನ್ನು ಪರ್ಯಾಯ ಅಂಶದಿಂದ ಬದಲಾಯಿಸುವುದು.

ಒಂದು ಮಗುವಿನ ವಿಕಲತೆಯ ರೋಗ ನಿರ್ಣಯವನ್ನು ಆಧರಿಸಿ ಸಮಂಜಸವಾದ ಸೌಕರ್ಯಗಳನ್ನು ನಿರ್ಧರಿಸಬಾರದು, ಅದನ್ನು ಒಂದು ನಿರ್ದಿಷ್ಟ ಮಗುವು ಶೈಕಣಿಕ ಪ್ರಕ್ರಿಯೆಯಲ್ಲಿ ಎದುರಿಸುವ ಅಡೆತಡೆಗಳನ್ನು ನೋಡುವ ಮೂಲಕ ನಿರ್ಧರಿಸಬೇಕು. ಸಮಂಜಸವಾದ ಸೌಕರ್ಯಗಳನ್ನು ನೀಡದಿರುವಿಕೆಯನ್ನು ತಾರತಮ್ಯವೆಂದು ಪರಿಗಣಿಸಬೇಕು ಮತ್ತು ವಿದ್ಯಾರ್ಥಿಗಳು ತಮಗೆ ಅಗತ್ಯವಿರುವ ಸೌಕರ್ಯಗಳನ್ನು ನೀಡದಿರುವ ನಿರ್ಧಾರವನ್ನು ಪ್ರಶ್ನಿಸಲು ಸಾಧ್ಯವಾಗಬೇಕು.

ಸಾರ್ವತ್ರಿಕ ಬೆಂಬಲ: ದಿವ್ಯಾಂಗ ವಿದ್ಯಾರ್ಥಿಗಳು ತಮ್ಮ ಶಿಕ್ಷಣದಿಂದ ಹೆಚ್ಚಿನ ಲಾಭವನ್ನು ಹೊಂದುವ ಸಲುವಾಗಿ ಸಾರ್ವತ್ರಿಕ ಬೆಂಬಲವನ್ನು ಪಡೆಯಲು ಅರ್ಹರಾಗಿರುತ್ತಾರೆ. ಉದಾಹರಣೆಗೆ, ತರಬೇತಿ ಪಡೆದ ಮತ್ತು ಬೆಂಬಲಿತ ಬೋಧನಾ ಸಿಬ್ಬಂದಿ, ಶಾಲೆಯ ಸಲಹೆಗಾರರು, ಮನಃಶಾಸ್ತ್ರಜ್ಞರು ಮತ್ತು ಇತರ ಸಂಬಂಧಿತ ಆರೋಗ್ಯ ಮತ್ತು ಸಾಮಾಜಿಕ ಸೇವಾ ವೃತ್ತಿಪರರನ್ನು ಅವರು

ಹೊಂದಿರಲು ಅರ್ಹರಾಗಿರುತ್ತಾರೆ. ಹಾಗೆಯೇ ವಿದ್ಯಾರ್ಥಿ ವೇತನಗಳು ಮತ್ತು ಹಣಕಾಸಿನ ಸಂಪನ್ಮೂಲಗಳಿಗೆ ಅವಕಾಶವನ್ನು ಅದು ಒಳಗೊಂಡಿರಬಹುದು.

ವೈಯಕ್ತಿಕ (ಪ್ರತ್ಯೇಕ) ಶಿಕ್ಷಣ ಯೋಜನೆಗಳು: ವಿಕಲತೆ ಹೊಂದಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ವೈಯಕ್ತಿಕ ಶಿಕ್ಷಣ ಯೋಜನೆಯನ್ನು ಒದಗಿಸಬೇಕು, ಅದು ಅವರಿಗೆ ಅಗತ್ಯವಿರುವ ಸೌಕರ್ಯ ಮತ್ತು ಬೆಂಬಲವನ್ನು ನಿಗದಿಪಡಿಸುತ್ತದೆ. ಈ ಯೋಜನೆಗಳನ್ನು ಸಂಪೂರ್ಣವಾಗಿ ಸಮನ್ವಯಿಸಲು ಸಹಾಯ ಮಾಡುವಂತೆ ವಿನ್ಯಾಸಗೊಳಿಸಬೇಕು. ಅಗತ್ಯವಿರುವ ಬೆಂಬಲವನ್ನು ಒದಗಿಸದಿದ್ದರೆ ವಿದ್ಯಾರ್ಥಿಯು ದೂರು ಸಲ್ಲಿಸಲು ಸಾಧ್ಯವಾಗಬೇಕು.

ನಿರ್ದಿಷ್ಟ ದುರ್ಬಲತೆಗೆ ಸೌಕರ್ಯವನ್ನು ಒದಗಿಸುವುದು  ಕೆಲವು ವಿದ್ಯಾರ್ಥಿಗಳ ಗುಂಪುಗಳಿಗೆ ನಿರ್ದಿಷ್ಟ ಸೇವೆಗಳ ಅಗತ್ಯವಿರಬಹುದು. ಇದರಿಂದ ಅವರು ಜೀವನ, ಭಾಷೆ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಪಡೆದುಕೊಂಡು ತಮ್ಮ ಶಿಕ್ಷಣದಿಂದ ಸಂಪೂರ್ಣವಾಗಿ ಪ್ರಯೋಜನ ಪಡೆಯಬಹುದು. ಉದಾಹರಣೆಗೆ:

-ಅಂಧ ಮತ್ತು ಭಾಗಶಃ ದೃಷ್ಟಿ ಹೊಂದಿರುವ ವಿದ್ಯಾರ್ಥಿಗಳು ಬ್ರೆಲ್ ಮತ್ತು ಇತರ ಪರ್ಯಾಯ ಸಂವಹನ ವಿಧಾನಗಳು, ಹಾಗೆಯೇ ದೃಷ್ಟಿಕೋನ ಮತ್ತು ಚಲನ ಶೀಲ ಕೌಶಲ್ಯಗಳನ್ನು ಕಲಿಯಲು ಸಾಧ್ಯವಾಗುವುದು

-ಕಿವುಡ ಮತ್ತು ಶ್ರವಣದೋಷವುಳ್ಳ ವಿದ್ಯಾರ್ಥಿಗಳು ಸಂಕೇತ ಭಾಷೆಯನ್ನು ಕಲಿಯುವ ಅವಕಾಶವನ್ನು ಹೊಂದಿರಬೇಕು ಮತ್ತು ಅವರ ಭಾಷೆಯ ಗುರುತನ್ನು ಪ್ರೋತ್ಸಾಹ ಮಾಡಬೇಕು, ಜೊತೆಗೆ ಗುಣಮಟ್ಟದ ಸ್ಪೀಚ್ ಥೆರಪಿ ಸೇವೆಗಳು, ಇಂಡಕ್ಷನ್ ಲೂಪ್ ಟೆಕ್ನಾಲಜಿ ಮತ್ತು ಶೀರ್ಷಿಕೆಗಳು ಸುಲಭವಾಗಿ ಲಭ್ಯವಾಗುವಂತಿರಬೇಕು.

-ಸಂವಹನದ ದೋಷವನ್ನು ಹೊಂದಿರುವವರು ತಮ್ಮನ್ನು ತಾವು ವ್ಯಕ್ತ ಪಡಿಸಿಕೊಳ್ಳಲು ಸಾಧ್ಯವಾಗುವಂತೆ ಸಂಕೇತ ಭಾಷೆಯನ್ನೂ ಒಳಗೊಂಡು  ಪರ್ಯಾಯ ಅಥವಾ ವರ್ಧನೆಯ ಸಂವಹನವನ್ನು, ಕಡಿಮೆ ಅಥವಾ ಹೆಚ್ಚಿನ ತಾಂತ್ರಿಕ ಸಂವಹನದ ಸಾಧನಗಳಾದ ಟ್ಯಾಬ್ಲೆಟ್‌ಗಳು, ಧ್ವನಿ ಉತ್ಪತಿಮಾಡುವ ಸಂವಹನ ಸಾಧನಗಳು (VOCAS) ಅಥವಾ ಸಂವಹನದ ಪುಸ್ತಕಗಳನ್ನು ನೀಡಿ ಅವಕಾಶ ಕಲ್ಪಿಸಬೇಕು.

-ಸಾಮಾಜಿಕ ಸಂವಹನದ ತೊಂದರೆಗಳನ್ನು ಹೊಂದಿರುವವರಿಗೆ ತರಗತಿಯ ಸಂಘಟನೆಯನ್ನು ಮಾರ್ಪಡಿಸುವುದರ ಮೂಲಕ, ಜೋಡಿಯಾಗಿ ಕೆಲಸ ಮಾಡುವುದು, ಜೊತೆಗಾರನ ಬೋಧನೆ, ಶಿಕ್ಷಕರ ಹತ್ತಿರ ಕುಳಿತುಕೊಳ್ಳುವ ವ್ಯವಸ್ಥೆ ಮತ್ತು ರಚನಾತ್ಮಕ ಮತ್ತು ಊಹಿಸಬಹುದಾದ ಪರಿಸರದ ಸೃಷ್ಟಿಯ ಮೂಲಕ ಬೆಂಬಲಿಸಬೇಕು.

-ಬೌದ್ಧಿಕ ದುರ್ಬಲತೆ ಹೊಂದಿರುವವರಿಗೆ ಸುರಕ್ಷಿತ, ಶಾಂತ ಮತ್ತು ರಚನಾತ್ಮಕ ಕಲಿಕೆಯ ವಾತಾವರಣದಲ್ಲಿ ಸುಲಭವಾಗಿ ಓದಬಹುದಾದ ಬೋಧನೆ ಮತ್ತು ಕಲಿಕಾ ಸಾಮಗ್ರಿಗಳನ್ನು ಒದಗಿಸಬೇಕು.

ತರಬೇತಿ ಹೊಂದಿದ ಶಿಕ್ಷಕರು: ಸಮನ್ವಯ ಪರಿಸರಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಶಿಕ್ಷಕರಿಗೆ ತರಬೇತಿ ನೀಡಬೇಕು. ವಿಕಲತೆ ಇರುವ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕು ಮತ್ತು ತರಬೇತಿ ನೀಡಬೇಕು. ಶಾಲೆಗಳಲ್ಲಿ ವಿಕಲತೆ ಇರುವ ಶಿಕ್ಷಕರು ಸಮಾನ ಹಕ್ಕನ್ನು ಉತ್ತೇಜಿಸಲು ಸಹಾಯ ಮಾಡುತ್ತಾರೆ, ಅನನ್ಯ ಪರಿಣತಿ ಮತ್ತು ಕೌಶಲ್ಯಗಳನ್ನು ಒದಗಿಸುತ್ತಾರೆ, ಅಡೆತಡೆಗಳನ್ನು ಭೇದಿಸಲು ಕೊಡುಗೆ ನೀಡುತ್ತಾರೆ ಮತ್ತು ಪ್ರಮುಖ ಮಾದರಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

ಶಿಕ್ಷಣದ ಹಕ್ಕು ಮತ್ತು ಇತರ ಮಾನವ ಹಕ್ಕುಗಳು

ಎಲ್ಲಾ ಮಾನವ ಹಕ್ಕುಗಳು ಪರಸ್ಪರ ಸಂಬಂಧ ಹೊಂದಿರುತ್ತದೆ. ಇದು ಶಿಕ್ಷಣದ ಹಕ್ಕನ್ನು ಒಳಗೊಂಡಿದೆ. ಇತರ ಹಕ್ಕುಗಳನ್ನು ಅರಿತು ಕೊಳ್ಳದೆಯೇ ಪರಿಣಾಮಕಾರಿ ಶಿಕ್ಷಣವನ್ನು ಸಾಧಿಸಲು ಸಾಧ್ಯವಿಲ್ಲ. ಶಿಕ್ಷಣದ ಹಕ್ಕನ್ನು ಪೂರೈಸಿದರೆ, ಅದು ಇತರ ಹಕ್ಕುಗಳನ್ನು ಕೈಗೂಡಿಸಿಕೊಳ್ಳಲು ಕಾರಣವಾಗುತ್ತದೆ.

| **ಅಗತ್ಯವಿದೆ:** | **ಸಮನ್ವಯ ಶಿಕ್ಷಣ** | **ಉತ್ತೇಜಿಸುತ್ತದೆ:** |
|---|---|---|
| ತಾರತಮ್ಯ ಮಾಡದಿರುವಿಕೆ | | ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವಿಕೆ |
| ಮಕ್ಕಳ ಉತ್ತಮ ಹಿತಾಸಕ್ತಿ | | ಕಾನೂನಿನ ಸಾಮರ್ಥ್ಯದ ಬಳಕೆ |
| ಮಗುವಿಗೆ ಅದು ಹೇಳಿದ್ದನ್ನು ಕೇಳಿಸಿಕೊಳ್ಳುವ ಹಕ್ಕು | | ಕೆಲಸ ಮತ್ತು ಉದ್ಯೋಗ |
| ಹಿಂಸೆ ಮತ್ತು ನಿಂದನೆಯಿಂದ ರಕ್ಷಣೆ | | ಸಮರ್ಪಕ ಜೀವನ ಮಟ್ಟ |
| ಸಮುದಾಯದೊಳಗೆ ಬದುಕುವ ಅವಕಾಶ | | |
| ಚಲನಶೀಲತೆಯೊಂದಿಗೆ ಬೆಂಬಲ | | |
| ಆರೋಗ್ಯ ರಕ್ಷಣೆಗೆ ಅವಕಾಶ | | |
| ವಸತಿ ಮತ್ತು ಪುನರ್ವಸತಿ | | |

ಸಮನ್ವಯ ಶಿಕ್ಷಣದ ಭರವಸೆ ನೀಡಲು ಸರ್ಕಾರಗಳು ಏನು ಮಾಡಬೇಕು?

ಶಿಕ್ಷಣಕ್ಕಾಗಿ ವ್ಯವಸ್ಥೆಗಳನ್ನು ಹುಟ್ಟುಹಾಕಿ: ಪ್ರತಿ ಮಗುವಿನ ಶಾಲಾ ಶಿಕ್ಷಣವು ಶಿಕ್ಷಣ ಸಚಿವಾಲಯದ ಜವಾಬ್ದಾರಿಯಾಗಿರಬೇಕು ಮತ್ತು ಅಂತರ್ಗತ ಶಿಕ್ಷಣವನ್ನು ಹುಟ್ಟುಹಾಕಲು ಸಹಾಯ ಮಾಡುವಲ್ಲಿ ಇತರ ಸಚಿವಾಲಯಗಳನ್ನು ತೊಡಗಿಸಿಕೊಳ್ಳಬೇಕು-ಉದಾಹರಣೆಗೆ,

ಮಕ್ಕಳು ಶಾಲೆಗೆ ಹೋಗಲು ಸಾರಿಗೆ ವ್ಯವಸ್ಥೆ, ಕಟ್ಟಡಗಳನ್ನು ಉಪಯೋಗಿಸಲು ಸುಲಭಸಾಧ್ಯವಾಗುವಂತೆ ಯೋಜನೆ, ಮಕ್ಕಳು ಸುರಕ್ಷಿತವಾಗಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ಮಕ್ಕಳ ರಕ್ಷಣೆ, ಸಾಕಷ್ಟು ನಿಧಿ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಹಣಕಾಸು.

ಕಾನೂನುಗಳು ಮತ್ತು ನೀತಿಗಳನ್ನು ಪರಿಚಯಿಸಿ: ಸಮನ್ವಯ ಶಿಕ್ಷಣವನ್ನು ಬೆಂಬಲಿಸಲು ಸರಿಯಾದ ಕಾನೂನುಗಳು ಮತ್ತು ನೀತಿಗಳು ಜಾರಿಯಲ್ಲಿರಬೇಕು, ಇದು ತಾರತಮ್ಯವನ್ನು ಕೊನೆಗೊಳಿಸುವ ಶಿಕ್ಷಣದ ಸಮಾನ ಹಕ್ಕಿನ ಭರವಸೆ, ಸಮನ್ವಯ ಶಿಕ್ಷಣದ ಭರವಸೆ, ಬೆಂಬಲ ಒದಗಿಸಲು, ಮಕ್ಕಳು ಹೇಳಿದ್ದನ್ನು ಕೇಳಿಸಿಕೊಳ್ಳುವ ಹಕ್ಕು, ಎಲ್ಲಾ ಶಾಲೆಗಳಿಗೆ ಪ್ರವೇಶಿಸಬಹುದೆಂಬುದನ್ನು ಖಚಿತಪಡಿಕೊಳ್ಳಲು ಕಾನೂನುಗಳನ್ನು ಒಳಗೊಳ್ಳಬಹುದು ಮತ್ತು ಚಿಕ್ಕ ಮಕ್ಕಳ ಆರಂಭಿಕ ಗುರುತಿಸುವಿಕೆ ಮತ್ತು ಮೌಲ್ಯಮಾಪನವನ್ನು ಪರಿಚಯಿಸಿ.

ಶಿಕ್ಷಣಯೋಜನೆಗಳನ್ನು ರಚಿಸಿ: ಸಮನ್ವಯ ಶಿಕ್ಷಣವನ್ನು ಪರಿಚಯಿಸಲು ಸರ್ಕಾರಗಳು 'ಕಾರ್ಯ ಯೋಜನೆ' ಯನ್ನು ಮಾಡಬೇಕಾಗಿದೆ. ಇದನ್ನಿಲ್ಲಿ ವಿವರಿಸಬೇಕಾದ ಅಗತ್ಯವಿದೆ, ಉದಾಹರಣೆಗೆ ಎಷ್ಟು ಹಣ ಲಭ್ಯವಾಗುತ್ತದೆ, ಎಷ್ಟು ಮಕ್ಕಳಿಗೆ ಶಾಲೆಯ ಸ್ಥಳವನ್ನು ಒದಗಿಸಿಬೇಕು, ಇದು ಸಂಭವಿಸುವಂತೆ ಮಾಡಲು ಯಾವ ಕ್ರಮವನ್ನು ಅನುಸರಿಸಬೇಕು ಮತ್ತು ಈ ಗುರಿಗಳನ್ನು ಯಾವಾಗ ಸಾಧಿಸುತ್ತದೆ ಎಂಬುದಕ್ಕೆ ಕಾಲಮಿತಿ.

ಮಾಹಿತಿ ಸಂಗ್ರಹಿಸಿ: ದಿವ್ಯಾಂಗ ಮಕ್ಕಳ ಸಂಖ್ಯೆ ಎಷ್ಟು ಮತ್ತು ಅವರ ಕಲಿಕೆಗೆ ಯಾವ ಸಹಾಯಬೇಕು ಎಂಬುದನ್ನು ಸರ್ಕಾರ ತಿಳಿದುಕೊಳ್ಳಬೇಕು. ಶಾಲೆಗೆ ಹೋಗುವ ವಿಷಯದಲ್ಲಿ ಅವರು ಯಾವ ಸಮಸ್ಯೆಗಳನ್ನು ಎದುರಿಸುತ್ತಾರೆ ಎಂಬುದನ್ನು ಸಹ ಅವರು ಕಂಡುಹಿಡಿಯಬೇಕು. ಈ ಮಾಹಿತಿಯಿಂದ ಮಾತ್ರ ಅವರು ಸರಿಯಾಗಿ ಯೋಜಿಸಬಹುದು.

ಸಂಸ್ಥೆಗಳನ್ನು ಮುಚ್ಚಿರಿ: ಎಷ್ಟೋ ದಿವ್ಯಾಂಗ ಮಕ್ಕಳು ಒತ್ತಾಯದಿಂದ ಸಂಸ್ಥೆಗಳಲ್ಲಿ ವಾಸಿಸುತ್ತಾರೆ-ಅನಾಥಾಶ್ರಮ, ವಸತಿಶಾಲೆಗಳು ಹೀಗೆ. ಸರಕಾರ ಈ ಪದ್ಧತಿಗೆ ಕಡಿವಾಣ ಹಾಕಬೇಕಾಗಿದೆ ಮತ್ತು ಆ ಮಕ್ಕಳು ತಮ್ಮ ಸ್ವಂತ ಕುಟುಂಬಗಳೊಂದಿಗೆ ಅಥವಾ ಸಮುದಾಯದ ಇತರ ಕುಟುಂಬಗಳೊಂದಿಗೆ ವಾಸಿಸಲು ಸಹಾಯ ಮಾಡಬೇಕು. ನಂತರ ಅವರು ಸ್ಥಳೀಯ ಶಾಲೆಗೆ ಹೋಗಬಹುದು.

ಹಣ ದೊರೆಯುವಂತೆ ಮಾಡಿ: ಪ್ರತ್ಯೇಕವಾದ ಶಾಲೆಗಳನ್ನು ಬೆಂಬಲಿಸಲು ಖರ್ಚು ಮಾಡುವ ಯಾವುದೇ ಹಣವನ್ನು ಸಮನ್ವಯ ಶಾಲೆಗಳನ್ನು ಬೆಂಬಲಿಸಲು ವಿನಿಯೋಗಿಸಿದ್ದಾರೆ ಎಂದು ಸರ್ಕಾರವು ಖಚಿತ ಪಡಿಸಿಕೊಳ್ಳಬೇಕು. ಅವರು ಶಾಲೆಗಳನ್ನು ದತ್ತು ಪಡೆಯಲು ಹಣ ಲಭ್ಯವಾಗುವಂತೆ ಮಾಡಬೇಕಾಗಿದೆ. ಅದರಿಂದ ಅವು ಎಲ್ಲಾ ಮಕ್ಕಳಿಗೂ ತಲುಪಬಹುದು. ಜೊತೆಗೆ, ವಿವಿಧ ದಿವ್ಯಾಂಗ ಮಕ್ಕಳಿಗೆ ಅಗತ್ಯವಿರುವ ಕಲಿಕಾ ಸಾಮಗ್ರಿಗಳು ಮತ್ತು ಬೆಂಬಲವನ್ನು ಒದಗಿಸುವುದು. ಇದು ಕಲಿಕೆಗೆ ಸಹಾಯವಾಗುವ ಸಹಾಯಕ ತಂತ್ರಜ್ಞಾನಗಳನ್ನು ಒಳಗೊಂಡಿರಬಹುದು.

ಶಿಕ್ಷಕರ ತರಬೇತಿಯನ್ನು ಒದಗಿಸಿ: ವಿಭಿನ್ನ ಸಾಮರ್ಥ್ಯಗಳನ್ನು ಹೊಂದಿರುವ ಮಕ್ಕಳನ್ನು ಒಳಗೊಂಡ ಶಾಲೆಗಳಲ್ಲಿ ಕೆಲಸ ಮಾಡಲು ಎಲ್ಲಾ ಶಿಕ್ಷಕರಿಗೆ ತರಬೇತಿ ನೀಡಬೇಕು.

ಸಮನ್ವಯ ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ಪರಿಚಯಿಸಿ: ದಿವ್ಯಾಂಗ ಮಕ್ಕಳನ್ನು ಅವರು ವೈಯಕ್ತಿಕವಾಗಿ ಸಾಧಿಸಿರುವ ಪ್ರಗತಿಯ ಆಧಾರದ ಮೇಲೆ ಮೌಲ್ಯಮಾಪನ ಮಾಡಬೇಕು. ಅವರನ್ನು ಕೇವಲ ಒಂದು ಸಾಮಾನ್ಯ ಪರೀಕ್ಷಾ ವ್ಯವಸ್ಥೆಯ ಆಧಾರದ ಮೇಲೆ ನಿರ್ಣಯಿಸಬಾರದು.

ದೂರು ನೀಡುವ ಅಧಿಕಾರ ನೀಡಿ: ದಿವ್ಯಾಂಗ ಮಕ್ಕಳು, ತಮ್ಮ ಸಮನ್ವಯ ಶಿಕ್ಷಣದ ಹಕ್ಕಿಗೆ ಚ್ಯುತಿ ಬಂದಿದೆ ಎಂದು ಅರಿವಾಗಿ ಅಥವಾ ತಾವು ತಾರತಮ್ಯಕ್ಕೆ ಒಳಗಾಗುತ್ತಿದ್ದೇವೆಂದು ಅವರಿಗೆ ಅನಿಸಿದಲ್ಲಿ ಅವರು ದೂರು ಸಲ್ಲಿಸಲು ಶಕ್ತರಾಗಿರಬೇಕು, ಮತ್ತು ದೂರು ನೀಡುವ

ವ್ಯವಸ್ಥೆಯು ಸುರಕ್ಷಿತ ಮತ್ತು ಬಳಸಲು ಸುಲಭವಾಗಿರಬೇಕು, ದೂರು ನಿಜವಾದಲ್ಲಿ ಸರಕಾರಗಳು ಅಥವಾ ಶಾಲೆಗಳು ಕ್ರಮ ಕೈಗೊಳ್ಳಬೇಕು.

ಪ್ರಗತಿಯನ್ನು ಅಳೆಯಿರಿ: ಸರಕಾರವು ತನ್ನ ಗುರಿಗಳನ್ನು ಮತ್ತು ಸಮಯದ ಚೌಕಟ್ಟನ್ನು ಹೊಂದಿಸುವುದು ಮುಖ್ಯವಾಗಿದೆ ಇದರಿಂದ ಅದು ಪ್ರಗತಿಯನ್ನು ಸಾಧಿಸುತ್ತದೆಯೇ ಎಂದು ಅಳೆಯಬಹುದು. ಉದಾಹರಣೆಗೆ, ೫೦% ದಿವ್ಯಾಂಗ ಮಕ್ಕಳು ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದ ದಿನಾಂಕ.

ಹೆಚ್ಚಿನ ಮಾಹಿತಿ:

ಸಮನ್ವಯ ಶಿಕ್ಷಣದ ಕುರಿತು ಹೆಚ್ಚಿನ ಮಾಹಿತಿಗಾಗಿ

1. ಸಾಮಾನ್ಯ ಪ್ರತಿಕ್ರಿಯೆ ಸಂಖ್ಯೆ ೪, ಸಮನ್ವಯ ಶಿಕ್ಷಣ ಹಕ್ಕು, ನೀವು ಅದನ್ನು ಇಲ್ಲಿ ತಿಳಿದುಕೊಳ್ಳಬಹುದು:

http://tbinternet.ohchr.

org/_layouts/treatybodyexternal/Download.aspx?symbolno=CRPD/C/GC/4&Lang=en ಇದು ಇಂಗ್ಲೀಷ್, ಫ್ರೆಂಚ್, ಸ್ಪಾನಿಷ್, ರಷ್ಯನ್, ಚೈನೀಸ್ ಮತ್ತು ಅರೇಬಿಕ್ ಭಾಷೆಗಳಲ್ಲಿ ಲಭ್ಯವಿದೆ. ಇದು ವರ್ಡ್ ಮತ್ತು ಪಿಡಿಎಫ್ ರೂಪದಲ್ಲಿಯೂ ಲಭ್ಯವಿದೆ.

2. ಸಮನ್ವಯ ಶಾಲೆಗಳನ್ನು ರಚಿಸಲು ನಿಜವಾಗಿಯೂ ಉಪಯುಕ್ತ ಮಾರ್ಗದ ಇದೆ, ಅದರ ಹೆಸರು ಸಮನ್ವಯಕ್ಕಾಗಿ ಸೂಚ್ಯಂಕ

http://www.

csie.org.uk/resources/inclusion-index-explained.shtml

3. ವರ್ಲ್ಡ್ ಆಫ್ ಇನ್‌ಕ್ಲೂಷನ್ ಎಂಬ ಹೆಸರಿನ ವೆಬ್‌ಸೈಟ್ ಸಮನ್ವಯದ ಮೇಲೆ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸುತ್ತದೆ: http://

worldofinclusion.com/resources/

UNICEF ನ ಪ್ರಾದೇಶಿಕ ಕಚೇರಿ

ಯೂರೋಪ್ ಮತ್ತು ಮಧ್ಯ ಏಷ್ಯಾಗಾಗಿ

ಪಲಾಯಿಸ್ ಡೆಸ್ ನೇಷನ್ಸ್

ಸಿಎಚ್ 1211 ಜಿನಿವಾ 10

ಸ್ವಿಟ್ಜರ್ಲ್ಯಾಂಡ್